**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ. ಬೆಂಗಳೂರು -12**

ಸಂಖ್ಯೆ ಪಪೂಶಿಇ/ಶೈ.ಶಾ-05/ಹ.ಪ.-ಹೆ.ಅ.(ಪರೀಕ್ಷೆ)/2014-15 ದಿನಾಂಕ: .01.2015

## ಸುತ್ತೋಲೆ

**ವಿಷಯ:** ಪ್ರಥಮ ಹಾಗೂ ದ್ವಿತೀಯ ಪಿಯುಸಿ ಹಳೆಯ ಪಠ್ಯಕ್ರಮದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಹಳೆಯ ಪಠ್ಯಕ್ರಮದಲ್ಲಿಯೇ ಪರೀಕ್ಷೆ ಬರೆಯಲು ಹೆಚ್ಚುವರಿ ಮೂರು ಅವಕಾಶಗಳನ್ನು ನೀಡುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಇಡಿ 165 ಟಿಪಿಯು 2013, ದಿನಾಂಕ:02-01-2014.

2. ಪಪೂಶಿಇ/ಶೈಶಾ-05/ಹ.ಪ.-ಹೆಚ್ಚುವರಿ ಅವಕಾಶ(ಪರೀಕ್ಷೆ) 2013-14 ದಿನಾಂಕ:10-01-2014.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (2) ರ ಸುತ್ತೋಲೆಯಲ್ಲಿ ಹಳೆಯ ಪಠ್ಯಕ್ರಮದಲ್ಲಿ ಅನುತ್ತೀರ್ಣರಾದ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಯ ವಿದ್ಯಾರ್ಥಿಗಳಿಗೆ ಹಳೆಯ ಪಠ್ಯಕ್ರಮದಲ್ಲಿಯೇ ಪರೀಕ್ಷೆಗಳನ್ನು ಬರೆಯಲು ಪ್ರಥಮ ಪಿಯುಸಿ ಪಿ.ಸಿ.ಎಂ.ಬಿ. ವಿಜ್ಞಾನ ವಿಷಯಗಳಿಗೆ 2014 ರ ಪೂರಕ ಪರೀಕ್ಷೆ , ಪಿ.ಸಿ.ಎಂ.ಬಿ. ಹೊರತುಪಡಿಸಿದ ಕಲಾ, ವಾಣಿಜ್ಯ, ಭಾಷೆ ಹಾಗೂ ವಿಜ್ಞಾನ ವಿಷಯಗಳಾದ ಗೃಹವಿಜ್ಞಾನ, ಕಂಪ್ಯೂಟರ್ ಸೈನ್ಸ್, ಸಂಖ್ಯಾಶಾಸ್ತ್ರ, ಎಲೆಕ್ಟ್ರಾನಿಕ್ಸ್ ವಿಷಯಗಳಿಗೆ 2015 ರ ಪೂರಕ ಪರೀಕ್ಷೆ, ಹಾಗೂ ದ್ವಿತೀಯ ಪಿಯುಸಿ ಪಿ.ಸಿ.ಎಂ.ಬಿ. ವಿಜ್ಞಾನ ವಿಷಯಗಳಿಗೆ 2015 ರ ಪೂರಕ ಪರೀಕ್ಷೆ. ಪಿ.ಸಿ.ಎಂ.ಬಿ. ಹೊರತುಪಡಿಸಿದ ಕಲಾ, ವಾಣಿಜ್ಯ, ಭಾಷೆ ಹಾಗೂ ವಿಜ್ಞಾನ ವಿಷಯಗಳಾದ ಗೃಹವಿಜ್ಞಾನ, ಕಂಪ್ಯೂಟರ್ ಸೈನ್ಸ್, ಸಂಖ್ಯಾಶಾಸ್ತ್ರ ಎಲೆಕ್ಟ್ರಾನಿಕ್ಸ್ ವಿಷಯಗಳಿಗೆ 2016 ರ ಪೂರಕ ಪರೀಕ್ಷೆಯಂತೆ, ಪರೀಕ್ಷೆಗಳನ್ನು ಬರೆಯಲು ಅವಕಾಶ ಕಲ್ಪಿಸಲಾಗಿತ್ತು.

ಆದಾಗ್ಯೂ ಅನೇಕ ವಿದ್ಯಾರ್ಥಿಗಳು ಅನುತ್ತೀರ್ಣರಾಗಿ ಉಳಿದುಕೊಂಡಿದ್ದು, ಅವರಿಂದ ಮನವಿಗಳು ಬಂದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕೆಳಕಂಡಂತೆ ಅವಕಾಶಗಳನ್ನು ಕಲ್ಪಿಸಲಾಗಿದೆ.

1. ಪ್ರಥಮ ಪಿಯುಸಿ ಪಿ.ಸಿ.ಎಂಬಿ. ವಿಜ್ಞಾನ ವಿಷಯಗಳಲ್ಲಿ ಹಳೆಯ ಪಠ್ಯಕ್ರಮದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಳೆಯ ಪಠ್ಯಕ್ರಮದಲ್ಲಿ ಪರೀಕ್ಷೆ ಬರೆಯಲು ಕೊನೆಯ ಅವಕಾಶ 2016 ರ ವಾರ್ಷಿಕ ಪರೀಕ್ಷೆ.
2. ಪ್ರಥಮ ಪಿಯುಸಿ ಪಿ.ಸಿ.ಎಂ.ಬಿ. ಹೊರತುಪಡಿಸಿದ ಕಲಾ, ವಾಣಿಜ್ಯ, ಭಾಷೆ ಹಾಗೂ ವಿಜ್ಞಾನ ವಿಷಯಗಳಾದ ಗೃಹವಿಜ್ಞಾನ, ಕಂಪ್ಯೂಟರ್ ಸೈನ್ಸ್, ಸಂಖ್ಯಾಶಾಸ್ತ್ರ, ಎಲೆಕ್ಟ್ರಾನಿಕ್ಸ್ ವಿಷಯಗಳಲ್ಲಿ ಹಳೆಯ ಪಠ್ಯಕ್ರಮದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಳೆಯ ಪಠ್ಯಕ್ರಮದಲ್ಲೇ ಪರೀಕ್ಷೆ ಬರೆಯಲು ಕೊನೆಯ ಅವಕಾಶ 2017 ರ ವಾರ್ಷಿಕ ಪರೀಕ್ಷೆ.

3. ದ್ವಿತೀಯ ಪಿಯುಸಿ ಪಿ.ಸಿ.ಎಂ.ಬಿ. ವಿಜ್ಞಾನ ವಿಷಯಗಳಲ್ಲಿ ಹಳೆಯ ಪಠ್ಯಕ್ರಮದಲ್ಲಿ ಪರೀಕ್ಷೆ ಬರೆಯಲು ಕೊನೆಯ ಅವಕಾಶ 2017 ರ ವಾರ್ಷಿಕ ಪರೀಕ್ಷೆ.
4. ದ್ವಿತೀಯ ಪಿಯುಸಿ ಪಿ.ಸಿ.ಎಂ.ಬಿ. ಹೊರತುಪಡಿಸಿದ ಕಲಾ, ವಾಣಿಜ್ಯ, ಭಾಷೆ ಹಾಗೂ ವಿಜ್ಞಾನ ವಿಷಯಗಳಾದ ಗೃಹವಿಜ್ಞಾನ, ಕಂಪ್ಯೂಟರ್ ಸೈನ್ಸ್, ಸಂಖ್ಯಾಶಾಸ್ತ್ರ ಎಲೆಕ್ಟ್ರಾನಿಕ್ಸ್ ವಿಷಯಗಳಲ್ಲಿ ಹಳೆಯ ಪಠ್ಯಕ್ರಮದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಳೆಯ ಪಠ್ಯಕ್ರಮದಲ್ಲಿ ಪರೀಕ್ಷೆ ಬರೆಯಲು ಕೊನೆಯ ಅವಕಾಶ 2018 ರ ವಾರ್ಷಿಕ ಪರೀಕ್ಷೆ.

ಈ ಸೌಲಭ್ಯವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ ಎಂಬ ಅಂಶವನ್ನು ಗಮನಕ್ಕೆ ತರಲಾಗಿದೆ.

Kodbole
ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ-ಮಾಹಿತಿಗಾಗಿ
2. ರಾಜ್ಯದ ಎಲ್ಲಾ ಪ್ರಾಂಶುಪಾಲರುಗಳಿಗೆ ಜಿಲ್ಲಾ ಉಪನಿರ್ದೇಶಕರುಗಳ ಮೂಲಕ-ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.
3. ಕಛೇರಿ ಪ್ರತಿ.